ಗುಲ್ಬರ್ಗಾ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗದಿರುವ ಗ್ರಾಮಗಳು.

೧೧೫೩. (ಡಿ) ಶ್ರೀ ವೀರಯ್ಯಸ್ವಾಮಿ (ಶಹಪುರ್).—ಮಾನ್ಯ ಕೈಗಾರಿಕಾ ಹಾಗೂ ವಿದ್ಯುತ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಗುಲ್ಬರ್ಗಾ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗದಿರುವ ಗ್ರಾಮಗಳ ಮತ್ತು ತಾಂಡಗಳ ಸಂಖ್ಯೆ ಎಷ್ಟು? ತಾಲ್ಲೂಕುವಾರು ಅಂಕಿ ಸಂಡಿವುದು :

ಆ) ಸರ್ಕಾರದಿಂದ ಇವುಗಳನ್ನು ವಿದ್ಯುದ್ದೀಕರಣಗೊಳಿಸಲು ಕೈ ಕೊಂಡ ಕ್ರಮಗಳೇನು ?

ಇ) ಗುಲ್ಬರ್ಗಾ ಜಿಲ್ಲೆಯ ಶಹಾಪುರ ಮತ್ತು ಚಿಂಚೋಳಿ ತಾಲ್ಲೂಕುಗಳಲ್ಲಿ ಉಳಿದ ಗ್ರಾಮ ಮತ್ತು ತಾಂಡಾಗಳನ್ನು ಯಾವಾಗ ವಿದ್ಯುದ್ದೀಕರಣಗೊಳಿಸಲಾಗುತ್ತದೆ?

ಶ್ರೀ ಜೆ. ಹೆಚ್. ಪಟೇಲ್ (ಕೈಗಾರಿಕೆ ಮತ್ತು ವಿದ್ಯುತ್ ಸಚಿವರು).—

ಅ) ದಿನಾಂಕ ೨೮-೨-೧೯೮೭ ರಂದು ಗುಲ್ಬರ್ಗಾ ಜಿಲ್ಲೆಯಲ್ಲಿ ವಿದ್ಯುದ್ದೀಕರಣವಾಗದಿರುವ ಗ್ರಾಮಗಳ ಮತ್ತು ತಾಂಡಾಗಳ ಸಂಖ್ಯೆ ಕೆಳಕಂಡಂತಿವೆ ;

	ತಾಲ್ಲೂಕು	ಗ್ರಾಮಗಳು	ತಾಂಡಗಳು :
೧.	ಆಲಂದ್	ಇಲ್ಲ	೨೯
೨.	ಅಫಜಲ್‌ಪುರ	...	೧೩
೩.	ಚಿಂಚೋಳಿ	೨	೭೭
೪.	ಚಿತ್ತಾಪುರ	ಇಲ್ಲ	೩೨
೫.	ಗುಲ್ಬರ್ಗಾ	೧	೬೯
೬.	ಜೇವರ್ಗಿ	೩	೬
೭.	ಸೇಡಂ	೨	೫೨
೮.	ಶಹಾಪುರ	೧೪	೩೬
೯.	ಶೋರಾಪುರ	೧೫	೩೬
೧೦.	ಯಾದಗೀರ್	೪	೪೭
	ಒಟ್ಟು	೪೧	೪೩೭

ಆ) ರಾಜ್ಯದ ಎಲ್ಲಾ ಗ್ರಾಮಗಳನ್ನು ೧೯೮೮-೮೯ರ ಅಂತ್ಯದೊಳಗಡೆ ವಿದ್ಯುದ್ದೀಕರಣಗೊಳಿಸಲು ಉದ್ದೇಶಿಸಿದೆ.

(ಇ) ಗುಲ್ಬರ್ಗಾ ಜಿಲ್ಲೆಯ ಚಿಂಚೋಳಿ ಮತ್ತು ಶಹಾಪುರ ತಾಲ್ಲೂಕುಗಳಲ್ಲಿ ಉಳಿದಿರುವ ೧೬ ಗ್ರಾಮಗಳನ್ನು ಆರ್ಥಿಕ ಲಭ್ಯತೆಯನ್ನು ಅವಲಂಬಿಸಿ ೧೯೮೭-೮೮ರೊಳಗೆ ವಿದ್ಯುದ್ದೀಕರಣ ಗೊಳಿಸಲು ಉದ್ದೇಶಿಸಲಾಗಿದೆ. ಚಿಂಚೋಳಿ ತಾಲ್ಲೂಕಿನಲ್ಲಿ ೫೫ ತಾಂಡಾಗಳನ್ನು ವಿದ್ಯುದ್ದೀಕರಣ ಗೊಳಿಸಲು ಆರ್. ಇ. ಸಿ. ಯಿಂದ ಯೋಜನೆ ಮಂಜೂರಾಗಿದ್ದು ಇವುಗಳನ್ನು ೨ ವರ್ಷದೊಳಗೆ ಪೂರ್ಣಗೊಳಿಸುವ ನಿರೀಕ್ಷೆಯಿದೆ. ಇತರ ತಾಲ್ಲೂಕುಗಳ ತಾಂಡಾಗಳ ವಿದ್ಯುದ್ದೀಕರಣಕ್ಕೆ ಯೋಜನೆಯನ್ನು ತಯಾರಿಸಿ ಆರ್.ಇ.ಸಿ.ಗೆ. ಕಳುಹಿಸಲಾಗಿರುತ್ತದೆ.

ಕಾದಿರಿಸಲಾದ ಅರಣ್ಯ ಪ್ರದೇಶದೊಳಕ್ಕೆ ಮೇಕೆಗಳ ಪ್ರವೇಶ.

೯೭೭. ಶ್ರೀ ಜಿ. ರಾಜೂಗೌಡ (ಹನೂರು).—ಮಾನ್ಯ ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಅ) ಕಾಯ್ದಿರಿಸಿದ ಅರಣ್ಯ ಪ್ರದೇಶದಲ್ಲಿ ಮೇಕೆಗಳನ್ನು ಬಿಡಬಾರದೆಂದು ಸರ್ಕಾರದವರು ಆದೇಶ ಹೊರಡಿಸಿದ್ದಾರೆಯೆ?

(ಆ) ಮೇವು ಸಿಗದೆ ಇರುವ ಬರಗಾಲದಲ್ಲೂ ಸಹ ರೈತರಿಂದ ಹಣವನ್ನು ವಸೂಲು ಮಾಡಿ ಮೇಕೆಗಳನ್ನು ಕಾಡಿನೊಳಗೆ ಬಿಟ್ಟಿರುವ ದೂರು ಕೊಳ್ಳೇಗಾಲ ವಿಭಾಗದ ಜನರಿಂದ ಸರ್ಕಾರದವರಿಗೆ ಬಂದಿದೆಯೆ?

(ಇ) ಕಾಡಿನಿಂದ ದನಗಳಿಗೆ ಮೇವು ತರುವಾಗ ಜನಗಳನ್ನು ಹಿಂಸಿಸಿ ಅವರಿಂದ ಹಣವನ್ನು ದಂಡದ ರೂಪದಲ್ಲಿ ವಸೂಲಿ ಮಾಡಿರುವ ಬಗ್ಗೆ ಸರ್ಕಾರದವರಿಗೆ ದೂರುಗಳು ಬಂದಿವೆಯೆ?

ಶ್ರೀ ಜೆ. ಎಸ್. ದೇಶಮುಖ್ (ಅರಣ್ಯ, ಗಣಿ ಹಾಗೂ ಭೂವಿಜ್ಞಾನ ಮಂತ್ರಿಗಳು).—

(ಆ) ಕರ್ನಾಟಕ ಅರಣ್ಯ ಅಧಿನಿಯಮ ೧೯೬೩, ನಿಯಮ ೬೨ರಲ್ಲಿ ಮೇಕೆಗಳನ್ನು ಮೇಯಿಸಲು ಕಾಯ್ದೆಬದ್ಧವಾಗಿ, ನಿಷಿದ್ಧ ಅರಣ್ಯ, ಸಂರಕ್ಷಿಸಿದ ಅರಣ್ಯ ಅಥವಾ ಜಿಲ್ಲಾ ಅರಣ್ಯ ಪ್ರದೇಶಗಳಲ್ಲಿ ಮೇಕೆಗಳನ್ನು ಮೇಯಿಸಲು ನಿಷೇಧಿಸಲಾಗಿದೆ.

(ಆ) ಇಲ್ಲಾ.

(ಇ) ಇಲ್ಲಾ.

ಬೇವೂರು ಗ್ರಾಮದಲ್ಲಿ ಪಶು ಚಿಕಿತ್ಸಾಲಯಗಳು.

೧೫೫೪. (ಡಿ).ಶ್ರೀ ಎಸ್.ಜಿ. ಸಂಜಯ್ಯನವರ್ (ಗುಳೇದಗುಡ್ಡ).—ಮಾನ್ಯ ರೇಷ್ಮೆ, ವ್ಯವಸಾಯ ಪಶುಸಂಗೋಪನಾ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಆ) ಬಿಜಾಪುರ ಜಿಲ್ಲೆಯ ಬಾಗಲಕೋಟೆ ತಾಲ್ಲೂಕಿನ ಬೇವೂರ ಗ್ರಾಮದಲ್ಲಿ ಪಶುಚಿಕಿತ್ಸಾಲಯ (ಗ್ರಾಮೀಣ) ಇರುವುದೇ ?

(ಆ) ಹಾಗಿದ್ದಲ್ಲಿ ಅದು ಯಾವ ವರ್ಷದಲ್ಲಿ ಮಂಜೂರಾಗಿದೆ ?

(ಇ) ಅಲ್ಲಿ ಪಶು ಚಿಕಿತ್ಸಕರು ಮತ್ತು ಇತರ ಅಗತ್ಯವಾದ ಸಿಬ್ಬಂದಿ ಹಾಗೂ ಇನ್ನಿತರ ಅನುಕೂಲಗಳಿವೆಯೇ ?

ಶ್ರೀ ಕೆ. ಎಂ. ಕೃಷ್ಣಾ ರೆಡ್ಡಿ (ರೇಷ್ಮೆ, ಪಶುಸಂಗೋಪನೆ ಮತ್ತು ಮೀನುಗಾರಿಕೆ ಸಚಿವರು).—

(ಆ) ಇಲ್ಲಾ.

(ಆ) ೧೯೮೨-೮೩ನೇ ಸಾಲಿನಲ್ಲಿ ಮಂಜೂರಾಗಿತ್ತು. ಆದರೆ ಹಣಕಾಸಿನ ಮತ್ತು ಸಿಬ್ಬಂದಿ ವರ್ಗದವರ ಕೊರಿಕೆಯಿಂದಾಗಿ ಸದರಿ ಗ್ರಾಮೀಣ ಪಶುವೈದ್ಯಶಾಲೆಯನ್ನು ಪ್ರಾರಂಭಿಸಲಾಗಿಲ್ಲ.

(ಇ) ಉದ್ಭವಿಸುವುದಿಲ್ಲ.

ರಾಜ್ಯದಲ್ಲಿರುವ ತುಮರಿ ಗಿಡಗಳು.

೧೫೫೫. ಶ್ರೀ ಮಲ್ಲಿಕಾರ್ಜುನಗೌಡ ಎಸ್. ಪಾಟೀಲ್, (ಸಂಕೇಶ್ವರ,).—ಮಾನ್ಯ ರೇಷ್ಮೆ, ವ್ಯವಸಾಯ ಪಶು ಸಂಗೋಪನೆ ಹಾಗೂ ಮತ್ಸ್ಯೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

(ಆ) ಬೀಡಿ ಕಟ್ಟುವುದಕ್ಕಾಗಿ ಬೇಕಾಗುವ ತುಮರಿ ಗಿಡದ ಎಲೆಯ ಉತ್ಪಾದನೆ ಪ್ರಮಾಣ ಎಷ್ಟು?

(ಆ) ರಾಜ್ಯದಲ್ಲಿ ತುಮರಿ ಜಾತಿಯ ಗಿಡಗಳು ಯಾವ ಪ್ರದೇಶದಲ್ಲಿ ಹೆಚ್ಚಾಗಿರುತ್ತದೆ ?

(ಇ) ರಾಜ್ಯದಲ್ಲಿ ಬೀಡಿ ಕಟ್ಟುವುದಕ್ಕಾಗಿ ಹೊರ ರಾಜ್ಯದಿಂದ ತುಮರಿ ಗಿಡದ ಎಲೆಯನ್ನು ಆಮದು ಮಾಡಿಕೊಳ್ಳಲಾಗುತ್ತಿರುವುದು ನಿಜವೆ?